# ಭಗವಂತನ ದರ್ಶನ



❋ ಕರ್ಮವನ್ನು ಎಲ್ಲಿಯವರೆಗೆ ಮಾಡಬೇಕಾಗುವುದು ಗೊತ್ತೆ? ಭಗವಂತನ ಸಾಕ್ಷಾತ್ಕಾರವಾಗದವರೆಗೆ. ಆತನ ಸಾಕ್ಷಾತ್ಕಾರವಾದೊಡನೆ ಎಲ್ಲಾ ತಾನಾಗಿಯೇ ನಿಂತು ಹೋಗುತ್ತವೆ. ಆಗ ಮನುಷ್ಯ ಪಾಪಪುಣ್ಯಗಳಿಗೆ ಅತೀತನಾಗುತ್ತಾನೆ. ಕಾಯಿ ತಲೆದೋರಿದೊಡನೆಯೇ ಹೂವು ಉದುರಿಹೋಗುತ್ತದೆ. ಕಾಯಿ ಬಿಡುವುದಕ್ಕೋಸ್ಕರ ಹೂವು ಉಂಟಾಗುವುದು.

❋ ಸಂಧ್ಯಾವಂದನಾದಿ ಕರ್ಮಗಳನ್ನು ಎಲ್ಲಿಯವರೆಗೆ ಮಾಡಬೇಕು ಗೊತ್ತೆ? ಎಲ್ಲಿಯವರೆಗೆ ಭಗವನ್ನಾಮೋಚ್ಚಾರಣೆ ಮಾಡಿದ ಮಾತ್ರದಿಂದಲೇ ಮೈಯಲ್ಲಿ ರೋಮಾಂಚನವಾಗದೊ, ಕಣ್ಣುಗಳಲ್ಲಿ ಪ್ರೇಮಾಶ್ರು ಸುರಿಯದೊ ಅಲ್ಲಿಯವರೆಗೆ. ಈ ಅವಸ್ಥೆಗಳೆಲ್ಲ ಭಗವಂತನ ಸಾಕ್ಷಾತ್ಕಾರವಾಗಿರುವುದರ ಲಕ್ಷಣ; ಭಗವಂತನಲ್ಲಿ ಶ್ರದ್ಧಾಭಕ್ತಿಯನ್ನು ಗಳಿಸಿಕೊಂಡಿರುವುದರ ಚಿಹ್ನೆ. ಭಗವಂತನ ಸಾಕ್ಷಾತ್ಕಾರ ದೊರೆತುದೇ ಆದರೆ ಮನುಷ್ಯ ಪಾಪ - ಪುಣ್ಯಗಳಿಗೆ ಅತೀತನಾಗಿಬಿಡುತ್ತಾನೆ.

❋ ಬ್ರಹ್ಮಜ್ಞಾನ ಪಡೆದುಕೊಂಡು ನಂತರ ಸಂಸಾರದಲ್ಲಿ ಇರಲು ಸಾಧ್ಯ. ಆದರೆ ಮೊದಲು ಬ್ರಹ್ಮಜ್ಞಾನವನ್ನು ದೊರಕಿಸಿಕೊಳ್ಳಬೇಕು. ಸಂಸಾರವೆಂಬ ನೀರಿಗೆ ಮನಸ್ಸೆಂಬ ಹಾಲನ್ನು ಸುರಿದರೆ ಎರಡೂ ಬೆರೆತುಕೊಂಡುಬಿಡುತ್ತದೆ. ಆದ್ದರಿಂದ ಮನಸ್ಸೆಂಬ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಅದನ್ನು ಏಕಾಂತ ಸ್ಥಳದಲ್ಲಿ ಕಡೆದು ಬೆಣ್ಣೆ ತೆಗೆದ ನಂತರ ಬೇಕಾದರೆ ಅದನ್ನು ಸಂಸಾರವೆಂಬ ನೀರಿನಲ್ಲಿ ಇಡಬಹುದು. ಆದ್ದರಿಂದ, ನೀನೇ ನೋಡು, ಸಾಧನೆ ಆವಶ್ಯಕ. ಪ್ರಥಮ ಅವಸ್ಥೆಯಲ್ಲಿ ನಿರ್ಜನವಾಸ ಅತ್ಯಂತ ಆವಶ್ಯಕ. ಅಶ್ವತ್ಥ ವೃಕ್ಷ ಇನ್ನೂ ಸಸಿಯಾಗಿರುವಾಗ ಅದಕ್ಕೆ ಬೇಲಿ ಹಾಕಬೇಕು; ಇಲ್ಲದಿದ್ದರೆ ಆಡುಕುರಿಗಳು ಅದನ್ನು ತಿಂದುಬಿಡುತ್ತವೆ, ಆದರೆ ಅದರ ಬುಡ ದಪ್ಪವಾಯಿತು ಎಂದರೆ ಬೇಲಿಯನ್ನು ತೆಗೆದುಹಾಕಿಬಿಡಬಹುದು. ಅಷ್ಟೇ ಏಕೆ, ಆಗ ಅದಕ್ಕೆ ಆನೆ ತಂದು ಕಟ್ಟಿದರೂ ಏನೂ ಆಗದು.

❋ ಮೊದಮೊದಲು ಸಾಧಕ ಆಗಾಗ ಏಕಾಂತಸ್ಥಳಕ್ಕೆ ಹೋಗಿ ಇರಬೇಕು. ಸಾಧನೆ ಆವಶ್ಯಕ. ನಿನಗೆ ಅನ್ನ ತಿನ್ನಬೇಕು ಅಂತ ಇಚ್ಛೆ ಇದೆ ಅಂತ ಇಟ್ಟುಕೊ. ಸುಮ್ಮನೆ ಒಂದು ಜಾಗದಲ್ಲಿ ಕುಳಿತುಕೊಂಡು ನೀನು ಹೇಳಲಾರಂಭಿಸಿದರೆ:'ಸೌದೆಯಲ್ಲಿ ಬೆಂಕಿ ಇದೆ. ಆ ಬೆಂಕಿಯಿಂದ ಅನ್ನವಾಗುತ್ತದೆ,' ಅಷ್ಟಕ್ಕೇ ಅನ್ನ ತಯಾರಾಗಿ ಹೋಗುವುದೆ? ಎರಡು ತುಂಡು ಸೌದೆ ತಂದು ಅವನ್ನು ಉಜ್ಜಿದರೆ ಅವುಗಳಿಂದ ಬೆಂಕಿ ಹೊರಬರುತ್ತದೆ.

❋ ಬೇಕಾದಷ್ಟನ್ನು ಪುಸ್ತಕ ಓದಿ ತಿಳಿದುಕೊಳ್ಳಬಹುದು. ಆದರೆ ಭಗವಂತನಲ್ಲಿ ಭಕ್ತಿಯಿಲ್ಲದಿದ್ದರೆ, ಆತನ ಸಾಕ್ಷಾತ್ಕಾರ ಪಡೆಯಬೇಕು ಎಂಬ ಇಚ್ಛೆಯಿಲ್ಲದಿದ್ದರೆ ಎಲ್ಲವೂ ವ್ಯರ್ಥ. ವಿವೇಕ ವೈರಾಗ್ಯಗಳಿಲ್ಲದ ಬರಿಯ ವಿದ್ವಾಂಸರ ದೃಷ್ಟಿ ಕಾಮಕಾಂಚನಗಳ ಮೇಲೆ ನೆಲೆಸಿರುತ್ತದೆ. ಹದ್ದು ಬಹಳ ಎತ್ತರಕ್ಕೇನೊ ಹಾರಿಹೋಗುತ್ತದೆ, ಆದರೆ ಅದರ ದೃಷ್ಟಿ ಮಾತ್ರ ಹೆಣದ ಗುಂಡಿಗಳ ಕಡೆಗೇ.

❋ ಯಾವ ವಿದ್ಯೆಯಿಂದ ಭಗವಂತನ ಸಾಕ್ಷಾತ್ಕಾರ ದೊರೆಯುವುದೋ ಅದೇ ನಿಜವಾದ ವಿದ್ಯೆ. ಉಳಿದುದೆಲ್ಲಾ ಯಾವುದಕ್ಕೂ ಬಾರದ್ದು.

❋ ಭಗವಂತನಿದ್ದಾನೆ ಎಂಬುದಕ್ಕೆ ಈ ಜಗತ್ತಿನ ಕಡೆ ನೋಡಿದರೇ ಸಾಕು. ಆದರೆ ಆತನ ವಿಷಯವಾಗಿ ಕೇಳುವುದು ಒಂದು, ಆತನನ್ನು ನೋಡುವುದು ಇನ್ನೊಂದು, ಆತನೊಡನೆ ಮಾತುಕತೆಯಾಡುವುದು ಮತ್ತೊಂದು ವಿಧದ ಅನುಭವ. ಕೆಲವರು ಹಾಲಿನ ವಿಷಯವಾಗಿ ಕೇಳಿದ್ದಾರೆ, ಇನ್ನು ಕೆಲವರು ಅದನ್ನು ನೋಡಿದ್ದಾರೆ, ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ಹಾಲನ್ನು ನೋಡಿದಾಗ ಆನಂದವೇನೊ ಆಗುತ್ತದೆ. ಆದರೆ ಕುಡಿದಾಗ ಬಲವುಂಟಾಗುತ್ತದೆ, ದೇಹ ಪುಷ್ಟಿಗೊಳ್ಳುತ್ತದೆ. ಭಗವಂತನನ್ನು ದರ್ಶನ ಮಾಡಿದಾಗ ಶಾಂತಿಯೇನೊ ದೊರೆಯುತ್ತದೆ; ಆದರೆ ಆತನೊಡನೆ ಮಾತುಕತೆಯಾಡಿದರೆ ಆನಂದವುಂಟಾಗುತ್ತದೆ, ಬಲವೂ ಅಧಿಕವಾಗುತ್ತದೆ.

❋ ಎಲ್ಲಾ ಮತಗಳನ್ನು ಗೌರವಿಸು. ಆದರೆ ನೋಡು, ನಿಷ್ಠಾಭಕ್ತಿ ಎಂಬುದೊಂದಿದೆ. ಎಲ್ಲಾ ಮತಗಳನ್ನು ಗೌರವಿಸಬೇಕಾದ್ದೇನೋ ಸರಿ, ಆದರೆ ಅವುಗಳಲ್ಲಿ ಒಂದನ್ನು ಮಾತ್ರ ತನ್ನ ಇಡೀ ಹೃದಯದಿಂದ ಪ್ರೀತಿಸುವುದಕ್ಕೆ ನಿಷ್ಠೆ ಅಂತ ಹೆಸರು.

❋ **ಭಕ್ತ:** ಎಲ್ಲಾ ಮಾರ್ಗಗಳೂ ಸತ್ಯ ಎಂದು ಅರಿಯುವ ಬಗೆ ಹೇಗೆ?

**ಶ್ರೀರಾಮಕೃಷ್ಣರು:** ಯಾವುದಾದರೂ ಒಂದು ಮಾರ್ಗವನ್ನು ಸರಿಯಾಗಿ ಅನುಸರಿಸಿ ಮುಂದುವರಿದುದೇ ಆದರೆ ಭಗವಂತನನ್ನು ಮುಟ್ಟಬಹುದು. ಬಳಿಕ ಎಲ್ಲಾ ಮಾರ್ಗಗಳ ಸುದ್ದಿಸಮಾಚಾರಗಳನ್ನೂ ತಿಳಿದುಕೊಳ್ಳಬಹುದು. ಒಮ್ಮೆ ಹೇಗೊ ಮಾಡಿ ಚಾವಣಿಯ ಮೇಲಕ್ಕೆ ಹತ್ತಿಬಿಟ್ಟದ್ದೇ ಆದರೆ, ಬಳಿಕ ಬೇಕಾದರೆ ಮರದ ಹಂತಗಳ ಮೂಲಕ ಅಥವಾ ಬೊಂಬಿನ ಮೂಲಕ ಅಥವಾ ಹಗ್ಗದ ಮೂಲಕ ಕೆಳಕ್ಕೆ ಇಳಿದು ಬಂದುಬಿಡಬಹುದು.

❋ ಭಗವಂತನ ಕೃಪೆಯೊಂದೊದಗಿತು ಎಂದರೆ ಭಕ್ತ ಎಲ್ಲವನ್ನೂ ಅರಿತುಕೊಳ್ಳಬಲ್ಲ. ಆತನ ಸಾಕ್ಷಾತ್ಕಾರ ಒಮ್ಮೆ ದೊರೆಯಿತು ಎಂದರೆ, ಎಲ್ಲವನ್ನೂ ಅರಿತುಕೊಳ್ಳಲು ಸಾಧ್ಯ.

'ಶ್ರೀರಾಮಕೃಷ್ಣ ವಚನವೇದ'ದಿಂದ